Reclamation, Fusion
Surfacing, Spraying &
Environmental Solutions

Cpn cb Tupdl F di bohf Mjn juf e **Op**
i jsp f ffkffci p p fst
E brbmTusf f u
N n cbj

Tjs N be bn

S f g Tdsjq dpe f
T c T cn jttjpo pgdpqjf t pgof tqbqf s q crjdbujpot oefs Sfh mbujpo pgui f
TFCJ MjtujohPcrjhbujpot boe Ejtdrpt sf Sfr jsfn fout Sfh mbujpot

Pursuant to the provisions of Regulation 47(1) of SEBI (LODR) Regulations, 2015; please find attached newspaper publications as regards Board meeting scheduled on November 13, 2019.

(i) English : Business Standard
(ii) Kannada : Sanje Vani

Request to kindly take the same on record and oblige.

i bol joh p
p st gbjui g m
Gps EPS GPO FDI MJNJ FE

ADOR FONTECH LTD. Bangalore

Hf fui b E
Dpn qbo Tf dsf ubs

optiemus

OPTIEMUS INFRACOM LIMITED
Registered Office: - K-20, 2nd Floor, Lajpat Nagar Part-2, New Delhi-110024
Corporate Office: Plot No. 2A, First Floor, Sector-126, Noida, Uttar Pradesh- 201 301
CIN: L64200DL1993PLC054086
Ph. No: 0120-6721900 | Fax: 0120-6726895
Email: info@optiemus.com

NOTICE

NARAYANI STEELS LIMITED
(CIN: L27109WB1996PLC082021)
Regd. Office : 23A, N.S. Road, 7th Floor, Room-31, Kolkata - 700001
Corp. Office : Door No.49-24-66, Plot No 5, Sankarmatam Road, Visakhapatnam-530016
Website: www.narayanisteels.com
Email Id: info@narayanisteels.com

NOTICE OF BOARD MEETING

Notice is hereby given pursuant to Regulation 29 read with Regulation 47(1) of

Tantia CONSTRUCTIONS LIMITED
(CIN: L74210WB1964PLC026284)
Registered Office: DD-30, Sector 1, Salt Lake City, Kolkata – 700 064

NOTICE

Pursuant to Regulation 29 read with Regulation 47 and other relevant regulation of SEBI (Listing Obligations and Disclosure Requirements) Regulations 2015, notice is hereby given that the

VICTORY PAPER AND BOARDS (INDIA) LTD.
Regd. Office: 666/12, Anna Aluminium Building, Kizhakkambalam, Aluva, Ernakulam, Kerala, India- 683 562. CIN: L27100KL1994PLC008083
Web: www.vpbil.com, E-mail: vpbiltd@gmail.com
Tel. No. 0484 2680701

NOTICE OF BOARD MEETING

Notice is hereby given pursuant to Regulation 47 of the LODR, that a meeting of the Board of Directors of the Company is scheduled to be held on Wednesday, 13th November, 2019 at 3.00 PM at the registered office of the Company, 666/12, Kizhakkambalam, Aluva, Kerala, India inter alia, to consider and approve the unaudited financial results of the

CELEBRITY FASHIONS LIMITED
CIN : L17121TN1988PLC015655
Registered Office: SDF IV & C2, 3rd Main Road, MEPZ/SEZ, Tambaram, Chennai-600 045
email: investorservices@celebritygroup.com
Website: www.celebritygroup.com
Phone No: 044 -4343 2200/2300; Fax No: 044-4343 2128

NOTICE

NOTICE is hereby given pursuant to Regulation 29 read with Regulation 47 of SEBI (Listing Obligations and Disclosure Requirements) Regulations 2015, a meeting of the Board of Directors of CELEBRITY

Speed... Reliability... Value Performance

COMPUAGE INFOCOM LIMITED
CIN: L99999MH1999PLC135914
Regd. Office: D-601/602 & G-601/602, Lotus Corporate Park, Graham Firth Steel Compound, Western Express Highway, Goregaon (East), Mumbai – 400 063.
E-mail: investors.relations@compuageindia.com, Website: www.compuageindia.com

NOTICE

Pursuant to Regulation 29 read with Regulation 47 of the SEBI (Listing Obligation and Disclosure Requirements) Regulations, 2015, notice is hereby given that a meeting of the Board of Directors of the Company will

ಗೋವಾ ರಾಜ್ಯದ ಸಾಂಕಳಿಂ ನಗರದಲ್ಲಿ ಏರ್ಪಡಿಸಿದ್ದ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮದಲ್ಲಿ ಡಾ.ಅನಿಲ್ ಎಸ್.ರೆಡ್ಡಿ ಅವರಿಗೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ರವರು ವಿದ್ಯಾರ್ಥಿ ಸಂಘಟನೆ ಹಾಗೂ ಸಮಾಜ ಸೇವೆಯ ಸಾಧನೆಗಾಗಿ ಕರುನಾಡ ಭೂಷಣ ಪ್ರಶಸ್ತಿ ನೀಡಿ ಗೌರವಿಸಿದರು. ರಾಜ್ಯಸಭಾ ಸದಸ್ಯ ಪ್ರಭಾಕರ್ ಕೋರೆ ಮತ್ತಿತರರು ಇದ್ದಾರೆ.

ಬಿಎಂಎಸ್‌ಐಟಿಯಲ್ಲಿ ಪ್ರಾತ್ಯಕ್ಷಿಕೆ ಪ್ರದರ್ಶನ

ಯಲಹಂಕದ ಬಿಎಂಎಸ್‌ಐಟಿಯಲ್ಲಿ ವಿದ್ಯಾರ್ಥಿಗಳಿಂದ 500ಕ್ಕೂ ಹೆಚ್ಚು ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಯಿತು. ಪ್ರಾಂಶುಪಾಲ ಡಾ. ಮೋಹನ್ ಬಾಬು ಜಿ.ಎನ್ ಅವರು ವೀಕ್ಷಿಸಿದರು.ಐಐಎಸ್‌ಸಿ, ಐಬಿಎಂ, ವಿಪ್ರೋ, ರಾಬರ್ಟ್ ಬೋಸ್ಚ್ ಸಂಸ್ಥೆಗಳ ನುರಿತ ತಜ್ಞರು ಭಾಗವಹಿಸಿದ್ದರು.

ಬೆಂಗಳೂರು, ನ. 5– ನಗರದ ಯಲಹಂಕದ ಬಿಎಂಎಸ್‌ಐಟಿಯಲ್ಲಿ ವಿದ್ಯಾರ್ಥಿಗಳಿಂದ ಪ್ರಾತ್ಯಕ್ಷಿಕೆ ಪ್ರದರ್ಶನವನ್ನು ನಡೆಸಲಾಯಿತು. ಇಂಜಿನಿಯರಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಸುಮಾರು 500ಕ್ಕೂ ಹೆಚ್ಚು ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಯಿತು.ಈ ಪ್ರದರ್ಶನವನ್ನು ವೀಕ್ಷಿಸಿ ಮಾತನಾಡಿದ ಪ್ರಾಂಶುಪಾಲ ಡಾ. ಮೋಹನ್ ಬಾಬು ಜಿ.ಎನ್. ಅವರು ಕಳೆದ 4 ವರ್ಷಗಳಿಂದ ಈ ರೀತಿಯ ಪ್ರಾತ್ಯಕ್ಷಿಕೆ ಪ್ರದರ್ಶನವನ್ನು ವರ್ಷಕ್ಕೆ ಎರಡು ಬಾರಿ ಪ್ರತಿ ಸೆಮಿಸ್ಟರ್‌ನಲ್ಲಿ ಆಯೋಜಿಸಲಾಗುತ್ತಿದ್ದು, ಇದು ವಿದ್ಯಾರ್ಥಿಗಳ ಪ್ರಯೋಗಶೀಲತೆಗಳನ್ನು ಹೆಚ್ಚಿಸುವುದರ ಜೊತೆಗೆ ಅತ್ಯುತ್ತಮ ಕಲಿಕಾ ವಿಧಾನವಾಗಿದೆ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳಿಗೆ ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ಸಮಾಲೋಚನೆ ನಡೆಸುವ ಅವಕಾಶ ಕೂಡ ಕಲ್ಪಿಸಲಾಗಿತ್ತು. ಇದರಿಂದ ವಿದ್ಯಾರ್ಥಿಗಳು ಸಮಾಜಕ್ಕೆ ಉಪಯೋಗವಾಗುವಂತಹ ಪ್ರಯೋಗಗಳನ್ನು ಕೈಗೊಳ್ಳಲು ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ಈ ಪ್ರದರ್ಶದಲ್ಲಿ ಇಂಟರ್ ನೆಟ್ ಆಫ್ ಥಿಂಗ್ಸ್ ರೆಬೋಟಿಕ್ಸ್, ತ್ರಿಡಿ ಪ್ರಿಂಟಿಂಗ್ ಕ್ಲೀನ್ ಎನರ್ಜಿ ಎಕೊ ಫ್ರೆಂಡ್ಲಿ ಸ್ಟ್ರಕ್ಚರ್ಸ್ ಸೋಲಾರ್ ಪ್ಯಾನೆಲ್, ಇನ್ನೂ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಗಿತ್ತು.

ಐ.ಐ.ಎಸ್.ಸಿ, ಐಬಿಎಂ, ವಿಪ್ರೋ, ರೆಬೋರ್ಟ್ ಬಾಷ್, ಮುಂತಾದ ಸಂಸ್ಥೆಗಳ ನುರಿತ ತಜ್ಞರು ತೀರ್ಪುಗಾರರಾಗಿ ಆಗಮಿಸಿದ್ದರು.

ನೆಸ್ಟ್‌ಅವೇ ವಹಿವಾಟು ವಿಸ್ತರಣೆ

ಬೆಂಗಳೂರು, ನ 5– ಭಾರತದ ಅತ್ಯಂತ ದೊಡ್ಡ ನಿರ್ವಹಣೆಯ ಗೃಹ ಬಾಡಿಗೆಯ ಜಾಲ ನೆಸ್ಟ್‌ಅವೇ ಟೆಕ್ನಾಲಜೀಸ್ ತನ್ನ ವ್ಯಾಪಾರ ವಿಸ್ತರಣೆಯ ಯೋಜನೆಯನ್ನು ಪ್ರಕಟಿಸಿದೆ. ಅವರು ಇತ್ತೀಚೆಗೆ ದೇಶದ ಮುಂಚೂಣಿಯ ನೋಂದಣಿಯಾದ ರಿಯಲ್ ಎಸ್ಟೇಟ್ ಬಿಲ್ಡರ್‌ಗಳಲ್ಲಿ ಒಂದಾದ ಎಸ್‌ಎನ್‌ಎನ್ ಬಿಲ್ಡರ್ಸ್‌ನೊಂದಿಗೆ ಪರಸ್ಪರ ಒಡಂಬಡಿಕೆಗೆ ಬಂದಿದ್ದು ತನ್ನ ಎಲ್ಲಾ ಪ್ರಸ್ತುತ ಗ್ರಾಹಕರಿಗೆ ಹಾಗೂ ವಿವಿಧ ಹಂತದ ನಿರ್ಮಾಣದಲ್ಲಿರುವ ಹಸ್ತಾಂತರಕ್ಕೆ ಸಿದ್ಧವಾಗುವ ಪ್ರಕ್ರಿಯೆಯಲ್ಲಿರುವ 10000 ಅಪಾರ್ಟ್‌ಮೆಂಟ್‌ಗಳಿಗೆ ಸಮಗ್ರ ಬಾಡಿಗೆ ನೆರವು ನೀಡುತ್ತಿದೆ. ನೆಸ್ಟ್‌ಅವೇ ಕಳೆದ ಒಂದು ವರ್ಷದಲ್ಲಿ ಶೇ.200ರಷ್ಟು ಅಪಾರ ಪ್ರಗತಿ ಕಂಡಿದೆ. ನೆಸ್ಟ್‌ಅವೇ ಪ್ರಸ್ತುತ 18,500 ಮನೆಗಳನ್ನು ಹೊಂದಿದ್ದು ಇಂದಿರಾನಗರ, ಮಾರತ್‌ಹಳ್ಳಿ, ವೈಟ್‌ಫೀಲ್ಡ್, ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ ಇತ್ಯಾದಿ ಪ್ರದೇಶಗಳಲ್ಲಿ 27,000 ಬಾಡಿಗೆದಾರರಿಗೆ ವಸತಿ ಒದಗಿಸುತ್ತಿದೆ. ಬೆಂಗಳೂರಿನಲ್ಲಿ ಶೇ.85 ಸ್ವಾಧೀನದ ಪ್ರಮಾಣವು ಮಾರುಕಟ್ಟೆಯಲ್ಲಿ ನೆಸ್ಟ್‌ಅವೇ ಮನೆಗಳ ವಿಸ್ತಾರ ಒಪ್ಪಿಕೊಳ್ಳುವಿಕೆಯನ್ನು ತೋರುತ್ತದೆ ಎಂದು ಚೀಫ್ ಬ್ಯುಸಿನೆಸ್ ಆಫೀಸರ್ ಇಸ್ಮಾಯಿಲ್ ಖಾನ್ ಹೇಳಿದರು.

ದೆಹಲಿಯಲ್ಲಿ ಇಬ್ಬರಿಗೆ ಚೂರಿ ಇರಿತ

ನವದೆಹಲಿ, ನ. 5– ದಿನಸಿ ಅಂಗಡಿಯಲ್ಲಿ ನಡೆದ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿ ದುಷ್ಕರ್ಮಿಗಳ ಗುಂಪು ಚಾಕುವಿನಿಂದ ಇರಿದಿದ್ದರಿಂದ ಇಬ್ಬರು ಗಾಯಗೊಂಡಿರುವ ಘಟನೆ ದೆಹಲಿ ಕೀರ್ತಿ ನಗರದಲ್ಲಿ ಇಂದು ಬೆಳಿಗ್ಗೆ ಸಂಭವಿಸಿದೆ.

ಇಬ್ಬರಿಗೂ ಚೂರಿ ಇರಿತದ ಗಾಯಗಳಾಗಿದ್ದು, ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲೆ ಮಾಡಲಾಗಿದ್ದು, ಅವರಿಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆಂದು ಹೆಚ್ಚುವರಿ ಉಪ ಪೊಲೀಸ್ ಆಯುಕ್ತ ಸಮೀರ್ ಶರ್ಮಾ ತಿಳಿಸಿದ್ದಾರೆ.

ಈ ಘಟನೆಯ ಬಗ್ಗೆ ಕಾರಣವೇನು ಎಂಬ ಬಗ್ಗೆ ನಿಖರ ಮಾಹಿತಿ ಕಲೆ ಹಾಕಲು ಪೊಲೀಸರು ಮುಂದಾಗಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಇಂದು ಬೆಳಿಗ್ಗೆ 5.30ರ ಸಮಯದಲ್ಲಿ ದಿನಸಿ ಅಂಗಡಿಗೆ ತೆರಳಿದ್ದಾರೆ. ಈ ವೇಳೆ ನಾಲ್ವರಿಂದ 5 ಜನರಿದ್ದ ಗುಂಪಿನೊಂದಿಗೆ ಏಕಾಏಕಿ ಮಾತಿನ ಚಕಮಕಿ ನಡೆದಿದೆ. ಯಾವ ಕಾರಣಕ್ಕಾಗಿ ಮಾತಿನ ಚಕಮಕಿ ನಡೆಯಿತು ಎಂಬ ಬಗ್ಗೆ ಮಾಹಿತಿ ಇನ್ನು ಲಭ್ಯವಾಗಿಲ್ಲ. ಈ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿ ದುಷ್ಕರ್ಮಿಗಳ ತಂಡ ಇಬ್ಬರಿಗೂ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ.

ಬೆಳಗಿನ ವಾಯು ವಿಹಾರ ನಡೆಸುತ್ತಿದ್ದವರು ಪೊಲೀಸ್ ನಿಯಂತ್ರಣಾ ಕೊಠಡಿಗೆ ಮಾಹಿತಿ ರವಾನಿಸಿದ್ದಾರೆ. ಪೊಲೀಸರು ದಿನಸಿ ಅಂಗಡಿ ಸಮೀಪವಿರುವ ಸಿಸಿಟಿವಿ ಕ್ಯಾಮರಾಗಳನ್ನು ವಶಕ್ಕೆ ತೆಗೆದುಕೊಂಡು ಆರೋಪಿಗಳ ಚಹರೆಯನ್ನು ಪತ್ತೆ ಹಚ್ಚಲು ಮುಂದಾಗಿದ್ದಾರೆ.

ತ್ಯಾಜ್ಯ ನಿರ್ವಹಣೆ ಜಾಗೃತಿಗಾಗಿ ಹ್ಯಾಕಥಾನ್

ಬೆಂಗಳೂರು, ನ 5– ಬಯೋಮೆಡಿಕಲ್ ತ್ಯಾಜ್ಯಗಳ ಅಪಾಯಗಳ ಬಗ್ಗೆ ಎದ್ದಿರುವ ಕಳವಳವನ್ನು ಕ್ರಿಯೆಯಲ್ಲಿ ಇಳಿಸುವ ಕಾಲ ಬಂದಿದೆ ಮತ್ತು ಜನರ ಜೀವನ ಗುಣಮಟ್ಟವನ್ನು ಹೆಚ್ಚಿಸುವ ಸುಸ್ಥಿರ, ಆವಿಷ್ಕಾರಿ ವಿಧಾನಗಳ ಕುರಿತು ತ್ಯಾಜ್ಯ ನಿರ್ವಹಣೆ ವಿಚಾರವಾಗಿ ದೇಶವು ವೃತ್ತಿಪರರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳುವ ಸಮಯ ಬಂದಿದೆ.

ವೇಸ್ಟ್ ಇಂಪ್ಯಾಕ್ಟ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಬೆಂಗಳೂರು ಜಂಟಿಯಾಗಿ 'ಖಜುಟಚಿರುಓಇಫಾಛಿಣಜ–ಖಗಿ' ಹ್ಯಾಕಥಾನ್ ಅನ್ನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ನಲ್ಲಿ ಆಯೋಜಿಸಿವೆ. ಚಿಂತಕರು, ಎಂಜಿನಿಯರ್‌ಗಳು, ತ್ಯಾಜ್ಯ ಆಯುವವರು ಸ್ವಚ್ಛ ಭಾರತ್‌ಗಾಗಿ ಶ್ರಮಿಸುತ್ತಿರುವ ತಂಡಗಳು ಭಾಗವಹಿಸಿ ಬಯೋಮೆಡಿಕಲ್ ತ್ಯಾಜ್ಯವು ಉಂಟುಮಾಡುತ್ತಿರುವ ಪರಿಸರ ಮಾಲಿನ್ಯದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಿದ್ದಾರೆ. ಹ್ಯಾಕಥಾನ್ ಒಂದು ಸಮುದಾಯ ತಂಡವಾಗಿ ಕೆಲಸ ಮಾಡುವುದರ ಸಾಮರ್ಥ್ಯವನ್ನು ನಿರೂಪಿಸುವುದರ ಜತೆಗೆ ದೈನಂದಿನ ಸಮಸ್ಯೆಗಳಿಗೆ ತಾಂತ್ರಿಕ ಪರಿಹಾರ ಕಂಡುಕೊಳ್ಳುವಲ್ಲಿ ಸಹಭಾಗಿತ್ವ ಒದಗಿಸುವುದಲ್ಲದೆ ಆಲೋಚನೆಗಳನ್ನು ಪರಿಣಾಮಗಳಾಗಿ ಪರಿವರ್ತಿಸುವ ಉಪಕರಣವಾಗಿ ಕೆಲಸ ಮಾಡಲಿದೆ. ಜಗತ್ತಿನ ಉತ್ತಮ ಭವಿಷ್ಯಕ್ಕಾಗಿ ಎಲ್ಲರೂ ಭಾಗವಹಿಸಬೇಕೆಂದು ನಾವು ಆಹ್ವಾನ ನೀಡಲಾಗಿದ್ದು, ನೋಂದಣಿಗಾಗಿ 9845052536

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ: ಆರೋಪಿಗೆ ಜೀವಾವಧಿ

ಕಲಬುರಗಿ, ನ. 5– ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಆರೋಪಿಗೆ ಇಲ್ಲಿನ 2ನೇ ಅಪರ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ಮತ್ತು 1 ಲಕ್ಷ ರೂಪಾಯಿ ದಂಡ ವಿಧಿಸಿದೆ. ಇಂಗಳಗಿ ಗ್ರಾಮದ ಭೀಮಾಶಂಕರ ಮಲ್ಲಪ್ಪ ಜೀವಾವಧಿ ಶಿಕ್ಷೆಗೆ ಗುರಿಯಾದ ಆರೋಪಿ. 2017ರ ಆಗಸ್ಟ್ 4ರಂದು ಆರೋಪಿ ಅಪ್ರಾಪ್ತ ಬಾಲಕಿಯನ್ನು ಪುಸಲಾಯಿಸಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ. ಈ ಬಗ್ಗೆ ಯಾರಿಗಾದರೂ ಹೇಳಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದ. ಈ ಸಂಬಂಧ ವಾಡಿ ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ಪ್ರಕರಣ ದಾಖಲಾಗಿತ್ತು.

ಸಿಪಿಐ ಶಂಕರಗೌಡ ವಿ.ಪಾಟೀಲ ಅವರು ತನಿಖೆ ನಡೆಸಿ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 2ನೇ ಅಪರ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಗೋಪಾಲಪ್ಪ ಎಸ್. ಅವರು ಪೋಸ್ಕೋ ಕಾಯ್ದೆಯಡಿ ಆರೋಪಿಗೆ ಕಠಿಣ ಜೀವಾವಧಿ ಶಿಕ್ಷೆ ಮತ್ತು 1 ಲಕ್ಷ ರೂಪಾಯಿ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ನೊಂದ ಬಾಲಕಿಗೆ ದಂಡದ ರೂಪದ ಹಣದಲ್ಲಿ 1 ಲಕ್ಷ ರೂ. ಮತ್ತು ಜಿಲ್ಲಾ ಕಾನೂನು ನೆರವು ಸಮಿತಿಯಿಂದ ರೂ.5 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದ್ದಾರೆ.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ (ಪೋಕ್ಸೋ) ಎಲ್.ವಿ.ಚಟ್ನಾಳಕರ್ ವಾದ ಮಂಡಿಸಿದ್ದರು.

ನಗದು ಸಾಗಿಸುತ್ತಿದ್ದ ವಾಹನ ಕಮರಿಗೆ ಬಿದ್ದು ನಾಲ್ವರ ಸಾವು

ಕಥುವಾ (ಜಮ್ಮು–ಕಾಶ್ಮೀರ), ನ.5: ನಗದು ತುಂಬಿಕೊಂಡು ಹೋಗುತ್ತಿದ್ದ ವ್ಯಾನೊಂದು 500 ಮೀಟರ್ ಆಳದ ಕಮರಿಗೆ ಉರುಳಿಬಿದ್ದ ಪರಿಣಾಮ ಜಮ್ಮು–ಕಾಶ್ಮೀರ ಬ್ಯಾಂಕಿನ ನಾಲ್ವರು ಸಿಬ್ಬಂದಿ ಸತ್ತಿರುವ ಪ್ರಕರಣ ಇಲ್ಲಿಗೆ ಸಮೀಪದ ಬನಿ ಎಂಬಲ್ಲಿ ನಿನ್ನೆ ಸಂಜೆ ನಂತರ ನಡೆದಿದೆ.

ಈ ನಗದು ವಾಹನ ಕಥುವಾದಿಂದ ಬನಿ ಕಡೆಗೆ ಹೊರಟಿತ್ತು. ಅದರಲ್ಲಿ ಸುಮಾರು 1 ಕೋಟಿ ರೂ. ನಗದು ಇತ್ತೆನ್ನಲಾಗಿದೆ. ಬನಿಗೆ ಇನ್ನೇನು 17 ಕಿ.ಮೀ. ಇರುವಾಗ ಕರ್ದೂಹ್ ಮೊರ್ಹ ಬಳಿ ಇರುವ ಕಡಿದಾದ ತಿರುವಿನಲ್ಲಿ ಚಾಲಕನು ನಿಯಂತ್ರಣ ಕಳೆದುಕೊಂಡ ಪರಿಣಾಮ ವ್ಯಾನ್ ಆಳದ ಕಮರಿಗೆ ಉರುಳಿಬಿತ್ತು.

ಮೃತರನ್ನು ಚಾಲಕ ವಿಕ್ರಮ್ ಸಿಂಗ್, ಗನ್ ಮ್ಯಾನ್‌ಗಳಾದ ಯಶ್‌ಪಾಲ್ ಹಾಗೂ ಹರ್ಬನ್‌ಸಿಂಗ್ ಮತ್ತು ಕ್ಯಾಷಿಯರ್ ಕೇವಲ್ ಶರ್ಮಾ ಎಂದು ಗುರುತಿಸಲಾಗಿದೆ. ಮೂವರು ಸ್ಥಳದಲ್ಲೇ ಸತ್ತಿದ್ದು, ತೀವ್ರ ಗಾಯಗೊಂಡಿದ್ದ ಮತ್ತೊಬ್ಬರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಪೊಲಿಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಮಧ್ಯೆ, ಕಮರಿಗೆ ಬಿದ್ದ ವ್ಯಾನ್‌ನಲ್ಲಿದ್ದ ನಗದನ್ನು ಸುರಕ್ಷಿತವಾಗಿ ಸಂಗ್ರಹಿಸಿ ಬ್ಯಾಂಕಿನ ಬನಿ ಶಾಖೆಗೆ ತಲುಪಿಸಲಾಗಿದೆ.

ಶಾಸಕ ಶ್ರೀನಿವಾಸ್‌ಗೆ ಗ್ರಾಮಸ್ಥರ ತರಾಟೆ

ತುಮಕೂರು, ನ. 5– ಗುಬ್ಬಿ ತಾಲ್ಲೂಕು ಹಾಗಲವಾಡಿ ಕೆರೆಗೆ ನೀರು ಹರಿಸದ್ದಕ್ಕೆ ಸಾರ್ವಜನಿಕರು ಆಕ್ರೋಶಗೊಂಡಿದ್ದು, ಶಾಸಕ ಎಸ್. ಆರ್ ಶ್ರೀನಿವಾಸ್ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಪ್ರಸಂಗ ಜರುಗಿದೆ.

ಹಾಗಲವಾಡಿ ಗ್ರಾಮದ ಕರಿಯಮ್ಮ ದೇವಿ ದೇವಸ್ಥಾನದ ಸಮುದಾಯ ಭವನ ಉದ್ಘಾಟನೆಗೆ ಗುಬ್ಬಿ ಕ್ಷೇತ್ರದ ಜೆಡಿಎಸ್ ಶಾಸಕ ಎಸ್.ಆರ್ ಶ್ರೀನಿವಾಸ್ ಆಗಮಿಸಿದ್ದರು. ಉದ್ಘಾಟನೆ ನೆರವೇರಿಸಿ ವೇದಿಕೆ ಭಾಷಣ ಮಾಡುತ್ತಿರುವ ಸಂದರ್ಭದಲ್ಲಿ ಸಾರ್ವಜನಿಕರು ಶಾಸಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ವೇದಿಕೆ ಮೇಲೆ ಭಾಷಣ ಮಾಡುತ್ತಿರುವ ಸಂದರ್ಭದಲ್ಲಿ ಹೇಮಾವತಿ ನೀರು ಹರಿಸುವ ವಿಚಾರವಾಗಿ ಶ್ರೀನಿವಾಸ್ ಮಾತನಾಡಿದ್ದಾರೆ. ಆಗ ಸಿಟ್ಟಿಗೆದ್ದ ಗ್ರಾಮಸ್ಥರು ಹೇಮಾವತಿ ನೀರು ಹರಿಸುವ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದೀರಿ ಎಂದು ಆಕ್ಷೇಪ ವ್ಯಕ್ತಪಡಿಸಿ, ಶಾಸಕರ ಭಾಷಣಕ್ಕೆ ಗ್ರಾಮಸ್ಥರು ಅಡ್ಡಿಪಡಿಸಿದರು.

ವೇದಿಕೆಯಿಂದ ಕೆಳಗಿಳಿದರೂ ಸಹ ಗ್ರಾಮಸ್ಥರು ಶಾಸಕರನ್ನು ಬಿಡಲಿಲ್ಲ. ಕೆಳಗಿಳಿದು ಬರುತ್ತಿದ್ದಂತೆ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ವೇಳೆ ಸ್ಥಳದಲ್ಲಿ ತಳ್ಳಾಟ ನಡೆದಿದ್ದು, ಗಲಾಟೆಯಾಗುತ್ತಿದ್ದಂತೆ ಶಾಸಕ ಶ್ರೀನಿವಾಸ್ ಸ್ಥಳದಿಂದ ಕಾಲ್ಕಿತ್ತಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

ಜಾಹೀರಾತು ವ್ಯವಸ್ಥಾಪಕರು

ಬಸ್ ಚಾಲಕನ ಮೇಲೆ ಹಲ್ಲೆ!

ಅಥಣಿ,ನ. [illegible] ಕಾರಣಕ್ಕೆ ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮೇಲೆ ಹಲ್ಲೆ ನಡೆದಿರುವ ಘಟನೆ ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆದಿದೆ. ರೇವಣ್ಣ ಚಿನ್ನವರ ಹಲ್ಲೆಗೊಳಗಾಗಿರುವ ಬಸ್‌ಚಾಲಕ. ಮುದ್ದೇಬಿಹಾಳದಿಂದ ಅಥಣಿ ಮಾರ್ಗವಾಗಿ ಮಹಾರಾಷ್ಟ್ರದ ಮೀರಜ್‌ಗೆ ಸಂಚರಿಸುವ ವೇಳೆ ಬಸ್ ಚಾಲಕನ ಮೇಲೆ ಹಲ್ಲೆ ನಡೆಸಲಾಗಿದೆ.